


## ಮಾಹಿತಿಪೂರ್ಣ

'ಜಲ ಚಿಕಿತ್ಸೆ', ಸುಧಾ ಹೆಗಡೆ ಅವರ ಮುಖಪುಟ ಲೇಖನ (ಸುಧಾ. ಮೇ 10) ಉಪಯುಕ್ತ ಮಾಹಿತಿಯನ್ನೊಳಗೊಂಡಿದೆ. ಜೀವಜಲ ನೀರಿನ ಬಗೆಗಿನ ಅನೇಕ ಕುತೂಹಲಕಾರಿ ಅಂಶಗಳು ಲೇಖನದಲ್ಲಿವೆ.

—ಹೇಮಾ ಸುಬ್ರಹ್ಮಣ್ಯ ಆಗುಂಬೆ,
ಪಿ. ಗೋವಿಂದರಾಜು ಶಿವಮೊಗ್ಗ,
ವಿ.ಹೇಮಂತಕುಮಾರ ಬೆಂಗಳೂರು,
ಕೊಹಿಮ ಬಸರಕೋಡು,
ಮಧುರಾ ಸುಬ್ರಹ್ಮಣ್ಯ ಬೆಂಗಳೂರು

## ಜಲಜನಕ ಎಂದಾಗಬೇಕಿತ್ತು

ಲೇಖನದ ಆರಂಭದಲ್ಲಿ ನೀರಿನ ಪರಮಾಣು ರಚನೆಯ ಪ್ರತಿ ಅಣುವಿನಲ್ಲೂ ಎರಡು ಸಾರಜನಕ ಪರಮಾಣುಗಳು, ಒಂದು ಆಮ್ಲ ಜನಕದ ಪರಮಾಣು ಎಂದು ಬರೆಯಲಾಗಿದೆ. ಇದು ಸಾರಜನಕ ಬದಲಾಗಿ ಜಲಜನಕ ಎಂದಾಗಬೇಕಿತ್ತು.

— ಆರ್.ಎನ್.ಪೂವಣಿ ಉಜಿರೆ, ಶ್ರೀಶ ಬೆಂಗಳೂರು,
ಮೈ.ಸತೀಶಕುಮಾರ ಬಂಗಾರಪೇಟೆ,
ಜಿ. ಸುಬ್ರಹ್ಮಣ್ಯ ಬೆಂಗಳೂರು

## ಮಾರ್ಮಿಕ ಚಿತ್ರಣ

'ವಿಚಾರ ಲಹರಿ' ಯಲ್ಲಿ 'ಸಪಟ್ಟು ಸರಿರಾತ್ರಿ' (ಶಿಕಾಕು) ವಿಚಾರಪೂರ್ಣ. ಇಂದಿನ ಯಾಂತ್ರಿಕ ಯುಗದಲ್ಲಿ ಮಹಾನಗರ, ನಗರ, ಪಟ್ಟಣಗಳಲ್ಲಿ ರಾತ್ರಿಯ ಸಹಜತೆಗೆ, ಶಾಂತತೆಗೆ ಭಂಗ ಉಂಟಾಗಿದೆ. ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಾಗಿವೆ. ಹಿಂದೆ ಚಲನಚಿತ್ರ ಗೀತೆಯೊಂದರ ಪ್ರಕಾರ 'ಮುಂಬಯಿಯಲ್ಲಿ ರಾತ್ರಿ 12 ಗಂಟೆಗೆ ಸೂರ್ಯೋದಯವಾಗುತ್ತದೆ, ಬೆಳಿಗ್ಗೆ 6 ಗಂಟೆಗೆ ರಾತ್ರಿಯಾಗುತ್ತದೆ' ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ.

—ಮಹಾವೀರ ಕಾಸರ ಶಿವಮೊಗ್ಗ, ಸುಲೋಚನಾ ವಾದಿರಾಜ್ ಶಿವಮೊಗ್ಗ,
ರಾಜಶೇಖರ ಹಾದಿಮನಿ ಧಾರವಾಡ

## ಸಕಾಲಿಕ ಬರಹ

'ನಿಮ್ಮೊಡನೆ'ಯಲ್ಲಿ 'ಮಕ್ಕಳ ವಿರುದ್ಧ ಅಪರಾಧ ಹೆಚ್ಚಳ' (ಬಿ.ಎಂ. ಹನೀಫ್) ಲೇಖನ ಸಕಾಲಿಕ. ಮಕ್ಕಳ ವಿರುದ್ಧ ಅಪರಾಧಗಳು ದಿನೇ ದಿನೇ ಹೆಚ್ಚುತ್ತಲೇ ಇವೆ. ಆದರೂ ಸರ್ಕಾರವಾಗಲೀ, ಸಮಾಜವಾಗಲೀ ಇತ್ತ ಗಮನಹರಿಸುತ್ತಲೇ ಇಲ್ಲ ಎಂಬ ಅಂಶ ಈ ಲೇಖನದ ಅಂಕಿ ಅಂಶಗಳಿಂದ ತಿಳಿಯುತ್ತದೆ. ಮಕ್ಕಳ ಸುರಕ್ಷತೆ ಬಗ್ಗೆ ಅರಿವು ಇನ್ನಷ್ಟು ಹೆಚ್ಚಬೇಕು.

—ಗಾಣಧಾಳು ರಾಮಣ್ಣ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

## ಕಲಾತ್ಮಕ ಸಾಹಿಲ್ ಹೋರಿ

'ನಿಮ್ಮ ಪುಟ'ದಲ್ಲಿನ ಸಾಹಿಲ್ ಹೋರಿ (ಎಸ್. ಓಂಕಾರಯ್ಯ ತವನಿಧಿ) ಚಿತ್ರ ನೋಡಿ ಖುಷಿ ಆಯಿತು. ಹೋರಿಯ ಕೊಂಬುಗಳು ಆಕರ್ಷಕ, ಕಲಾತ್ಮಕವಾಗಿವೆ.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ

## ಕಥೆ ಚೆನ್ನಾಗಿದೆ

ಕಥೆ 'ದತ್ತು' (ಪಿ.ಬಿ. ಪ್ರಸನ್ನ)ಬಹಳ ಚೆನ್ನಾಗಿತ್ತು. ಕ್ಲೈಮಾಕ್ಸ್ ಅನ್ನು ಈ ರೀತಿ ನಿರೀಕ್ಷೆ ಮಾಡಿರಲಿಲ್ಲ. ಗಂಡನಿಗೆ, ಅತ್ತೆಯ ಮನೆಯವರಿಗೆ ಒಳ್ಳೆ ಬುದ್ಧಿ ಕಲಿಸಿದಳು. ಎಲ್ಲಕ್ಕಿಂತಲೂ ಹೆಚ್ಚಾಗಿ ಇನ್ನೊಂದು ಹೆಣ್ಣು ಮಗುವನ್ನು ದತ್ತು ಪಡೆಯುತ್ತೇನೆ ಎನ್ನುವ ವಿಷಯ ಗಮನಾರ್ಹ.

—ಎ.ಪಿ. ರಂಗನಾಥ್ ಮೈಸೂರು

## ಮೆಚ್ಚುವಂತದ್ದು

ಕಥೆ ಚೆನ್ನಾಗಿ ಮೂಡಿ ಬಂದಿದೆ. ಜೀವನದಲ್ಲಿ ಎಲ್ಲವನ್ನು ಧೈರ್ಯವಾಗಿ ಎದುರಿಸಿ ನಿಲ್ಲುವ ಹೆಣ್ಣಿನ ಧೈರ್ಯ ಮೆಚ್ಚತಕ್ಕದ್ದು.

— ಎಸ್. ವಿಜಯಕುಮಾರಿ ಬೆಂಗಳೂರು

## ಮನೆಯಲ್ಲೇ ಪೌಡರ್

'ಸೌಂದರ್ಯ' ಪುಟದಲ್ಲಿ 'ನಿಮ್ಮ ಟಾಲ್ಕಮ್ ಪೌಡರ್ ನೀವೇ ತಯಾರಿಸಿ' (ಪ.ರಾಮಕೃಷ್ಣ ಶಾಸ್ತ್ರಿ) ಲೇಖನ ಮಾಹಿತಿಪೂರ್ಣ. ಮಾರುಕಟ್ಟೆಯಲ್ಲಿ ಸಿಗುವ ಟಾಲ್ಕಮ್ ಪೌಡರುಗಳ ಗುಣಮಟ್ಟ ಖಾತ್ರಿ ಮಾಡಿಕೊಳ್ಳುವುದು ಕಷ್ಟ ಎನಿಸಿ ನಮಗೆ ಬೇಕಾದ ಟಾಲ್ಕಂ ಪೌಡರ್‌ನ್ನು ಮನೆಯಲ್ಲಿಯೇ ಏಕೆ ನಾವೇ ತಯಾರಿಸಿ ಕೊಳ್ಳಬಾರದು ಎಂಬ ಪ್ರಶ್ನೆ ಕುಟುಂಬದಲ್ಲಿ ಮಾರ್ದನಿಸಿತು. ಅದರ ತಯಾರಿಕೆಯಲ್ಲಿ ನಿರತರಾದೆವು.

— ಪ್ರಾರ್ಥನಾ ಹೇಮಂತಕುಮಾರ, ಸುಂದರ್ ಬೆಂಗಳೂರು

## ಧ್ಯಾನದಿಂದ ಏಕಾಗ್ರತೆ

'ಮರೆಯದಂತೆ ಇರುವುದು ಹೇಗೆ?' (ತನುಜಾ ಬಿ.ಎಂ.) ಎಲ್ಲ ವಿದ್ಯಾರ್ಥಿಗಳೂ, ಶಿಕ್ಷಕರೂ ಓದಲೇಬೇಕಾದ ಲೇಖನ ಇದು. ಧ್ಯಾನದಿಂದ ನೆನಪು, ಏಕಾಗ್ರತೆ ಖಂಡಿತಾ ಸಾಧ್ಯ.

—ನಾರಾಯಣ ಯಾಜಿ ಶಿರಾಲಿ, ಎಚ್.ಆನಂದಕುಮಾರ್ ಚಿತ್ರದುರ್ಗ

## ಗೋಥಿಕ್ ವಾಸ್ತು ಶಿಲ್ಪ

ಪ್ರವಾಸ ಲೇಖನ 'ಮುಂಬೈ ಗೋಥಿಕ್ ಶೈಲಿ ಕಟ್ಟಡಗಳು' (ಶ್ರೀನಿವಾಸ ಜೋಕಟ್ಟೆ) ಚೆನ್ನಾಗಿದೆ. ಆಂಗ್ಲರ ಆಡಳಿತದಲ್ಲಿ ಮುಂಬೈಯಲ್ಲಿ ನಿರ್ಮಾಣಗೊಂಡ ಗೋಥಿಕ್ ಶೈಲಿಯ ಕಟ್ಟಡಗಳು ಸ್ವತಂತ್ರ ಭಾರತದಲ್ಲಿನ ನಿರ್ಮಾಣದಂತಹ ಕಳಪೆ ಕಟ್ಟಡಗಳಲ್ಲ. ಇನ್ನೂ ಹಲವಾರು ಶತಮಾನಗಳ ಕಾಲ ಬಳಸಬಹುದು. ಇವುಗಳ ಉಳಿವಿಗಾಗಿ ಹೋರಾಟ ಸ್ವಾಗತಾರ್ಹ.

—ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

## ಪರಿಸರ ಪಾಠ

'ಸ್ವಾವಲಂಬಿ ಶಾಲೆಯ ಪರಿಸರ ಪಾಠ' (ಸುಶೀಲಾ ಡೋಣೂರ) ಲೇಖನ ಖುಷಿ ತಂದಿತು. ಮಕ್ಕಳಿಗೆ ಪಠ್ಯದ ಜೊತೆಗೆ ವಿದ್ಯುತ್ ಉತ್ಪಾದನೆ, ಗೊಬ್ಬರ, ಕಾಗದ ತಯಾರಿಕೆಯಂತಹ ಸ್ವಾವಲಂಬನೆಯ ಪಾಠ ಕಲಿಸುತ್ತಿರುವ ಮಾರತಹಳ್ಳಿ ವಾಗ್ದೇವಿ ವಿಲಾಸ ಶಾಲೆಯ ಕಾರ್ಯ ಶ್ಲಾಘನೀಯ.

—ರವೀಂದ್ರನಾಥ ಶಿ. ಯಡಹಳ್ಳಿ

## ಸೂಕ್ತ ನುಡಿನಮನ

'ರಂಗದಿಂದ ದೂರವಾದ ರಂಗಾ' (ಗಣೇಶ ಜೋಶಿ) ನುಡಿ ನಮನ ಲೇಖನ ಚೆನ್ನಾಗಿ ಮೂಡಿಬಂದಿದೆ.

—ಹಿ.ಶಾ.ಸುಬ್ರಹ್ಮಣ್ಯ ಬೆಂಗಳೂರು, ಮಲ್ಲಿಕಾರ್ಜುನ ಹುಲಗಬಾಳಿ ಬನಹಟ್ಟಿ

## ಚಿತ್ರ ಶೀರ್ಷಿಕೆ ಬದಲಾಗಿದೆ

ರಂಗಾ ಕುರಿತ ವಿವರಗಳು ಮತ್ತು ಪುಟ ವಿನ್ಯಾಸ ಆಕರ್ಷಕವಾಗಿದೆ. ಶೂಟಿಂಗ್ ನೋಡಿದ್ದ ನನಗೆ ಹಳೆ ನೆನಪುಗಳು ಮರುಕಳಿಸಿದವು. ಆದರೆ ಚಿತ್ರದ ಶೀರ್ಷಿಕೆ ಯೊಂದು ಬದಲಾಗಿದೆ. 'ಸಾವಿತ್ರಿ' ಚಿತ್ರದಲ್ಲಿ ಅಶ್ವಿನಿ ರಂಗಾ ಮತ್ತು ವಿಷಯಾ ಜೇವೂರ ಎಂದು ಪ್ರಕಟವಾಗಿದೆ. ಅದು 'ಉದ್ಭವ' ಚಿತ್ರದ ಸ್ಟಿಲ್ ಆಗಿದ್ದು, ಮಮತಾ ರಾವ್ ಹಾಗೂ ವಿಷಯಾ ಜೇವೂರ ಅವರ ಫೋಟೊ ಆಗಿದೆ.

—ಜಗದೀಶ ಎಮ್. ಪಾಟೀಲ ಸವದತ್ತಿ

ಹೌದು, ತಪ್ಪಾಗಿದೆ (ಸಂ)

## ಸವಿನೆನಪು

'ಸವಿ ಸವಿ ನೆನಪು' ಅಂಕಣದಲ್ಲಿ 'ನದಿ ಮೂಲ ಅನ್ವೇಷಣೆ ಸಂಭ್ರಮ' (ಬಿ. ಸತ್ಯನಾರಾಯಣ ಅರಸ) ಲೇಖನದ ಮೊದಲಲ್ಲೇ 'ವಾರಾಹಿ'ಯ ಮೂಲ ಸಹ್ಯಾದ್ರಿ ಪರ್ವತದ ಬಂಡೆಯೊಂದರ ಬುಡ'ವೆಂದು ತಿಳಿದರೂ ಸುಬ್ಬುರಾಯ ನೇತೃತ್ವದ ತಂಡ 'ವಾರಾಹಿ ಮೂಲ' ಅನ್ವೇಷಣೆಗೆ ಹೋಗಿದ್ದನ್ನು ಓದಿ ಆಶ್ಚರ್ಯವಾಯಿತು. ಆದರೆ ಲೇಖನ ಈ ನದಿ ಮೂಲದ ಸ್ಥಳದ ಸ್ಪಷ್ಟನೆಯನ್ನು ತಿಳಿಸಲೇ ಇಲ್ಲ.

—ಪತ್ರೇಶ್ ಹಿರೇಮಠ್ ಹಗರಿಬೊಮ್ಮನಹಳ್ಳಿ

## ಸಂಕೇತ್ ಸ್ಟುಡಿಯೊ ಉಲ್ಲೇಖಿಸಬೇಕಿತ್ತು

ಕನ್ನಡ ಸಿನಿಮಾ 4000 ಲೇಖನದಲ್ಲಿ ಶಂಕರ್‌ನಾಗ್ ಅವರ ಸಂಕೇತ್ ಸ್ಟುಡಿಯೊ ಬಗ್ಗೆ ಉಲ್ಲೇಖಿಸಬೇಕಿತ್ತು. ಬೆಂಗಳೂರಿನಲ್ಲಿ ರೆಕಾರ್ಡಿಂಗ್ ಸ್ಟುಡಿಯೊ ಇಲ್ಲದೆ ಚೆನ್ನೈಯನ್ನೇ ಅವಲಂಬಿಸಬೇಕಾಗಿದ್ದ ಕಾಲದಲ್ಲಿ ಶಂಕರ್‌ನಾಗ್ ಅವರು ಕಷ್ಟಪಟ್ಟು ಸಂಕೇತ್ ಸ್ಟುಡಿಯೊ ನಿರ್ಮಿಸಿದ್ದರು. ಕನ್ನಡ ಚಿತ್ರರಂಗಕ್ಕೆ ಅವರ ಕೊಡುಗೆ ಅಪಾರ.

— ಶ್ರೀನಿವಾಸ ಜಿ.ಬಿ. ಬೆಂಗಳೂರು